| ನೋಂದಣಿ ಸಂಖ್ಯೆ : Registration No. : | | | | | | | | | | | |
|---|---|---|---|---|---|---|---|---|---|---|---|

**X1 – 2025**

| ವಿಷಯ ಸಂಕೇತ / Subject Code | **29 (NS)** |
|---|---|

# ರಾಜ್ಯ ಶಾಸ್ತ್ರ / POLITICAL SCIENCE

**(Kannada and English Versions)**

[ಸಮಯ: 3 ಗಂಟೆಗಳು] [ಒಟ್ಟು ಪ್ರಶ್ನೆಗಳ ಸಂಖ್ಯೆ : 37] [ಗರಿಷ್ಠ ಅಂಕಗಳು : 80]

[Time : 3 Hours] [Total No. of questions : 37] [Max. Marks : 80]

**(Kannada Version)**

*ಸೂಚನೆಗಳು :*

1. *ಭಾಗ 'ಎ' ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.*
2. *ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ.*
3. *ಬಲಬದಿಯಲ್ಲಿ ಅಂಕಗಳನ್ನು ಸೂಚಿಸಲಾಗಿದೆ.*
4. *ಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆದು ಅವುಗಳ ಉತ್ತರಗಳನ್ನು ಬರೆಯಿರಿ.*
5. *ಚಿತ್ರಗಳನ್ನೊಳಗೊಂಡ ಪ್ರಶ್ನೆಗಳಿಗೆ ಪರ್ಯಾಯವಾಗಿ ಪ್ರಶ್ನೆ ಪತ್ರಿಕೆಯ ಕೊನೆಯಲ್ಲಿ ಪ್ರತ್ಯೇಕ 'ಇ' ಭಾಗದಲ್ಲಿ ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ವಿವರಣಾತ್ಮಕ ಪ್ರಶ್ನೆಗಳನ್ನು ನೀಡಲಾಗಿದೆ.*

## ಭಾಗ – ಎ

I. ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ : **(5 × 1 = 5)**

1) ಚುನಾವಣೆಯ ಮೂಲ ಪದ

a) ರಂಪಿಯರ್ b) ಟೆರ್ರೆರ್

c) ಎಲಿಗೆರ್ d) ಆಡ್ ಮತ್ತು ಮಿನಿಸ್ಟ್ರೇರ್

2) ಈ ಕೆಳಗಿನವುಗಳಲ್ಲಿ ಅಖಿಲ ಭಾರತ ಸೇವೆಗಳಿಗೆ ಸರಿಯಾದ ಉತ್ತರವನ್ನು ಬರೆಯಿರಿ.

i) ಭಾರತೀಯ ಆಡಳಿತ ಸೇವೆ

ii) ಭಾರತೀಯ ಪೋಲೀಸ್ ಸೇವೆ

iii) ಭಾರತೀಯ ಅರಣ್ಯ ಸೇವೆ

iv) ಭಾರತೀಯ ವಿದೇಶಾಂಗ ಸೇವೆ

a) i) ಮಾತ್ರ b) ii) ಮಾತ್ರ

c) i), ii) ಮತ್ತು iii) ಮಾತ್ರ d) i), ii), iii) ಮತ್ತು iv) ಮಾತ್ರ

3) ಜಾತಿ ಆಧಾರಿತ ಅಸಮಾನತೆ ಎಂದರೆ

a) ಮೇಲು ಜಾತಿ – ಕೀಳು ಜಾತಿ ಎಂಬ ಭಾವನೆ

b) ಶ್ರೀಮಂತ – ಬಡವ ಎಂಬ ಭಾವನೆ

c) ಗಂಡು – ಹೆಣ್ಣು ಎಂಬ ಭಾವನೆ


d) ಕರಿಯ – ಬಿಳಿಯ ಎಂಬ ಭಾವನೆ

4) ಆಸಿಯಾನ್ (ASEAN) ಸಂಘಟನೆ ಯಾವಾಗ ಸ್ಥಾಪನೆಯಾಯಿತು?

a) 1967 b) 1985

c) 1989 d) 2006

5) ಈ ಕೆಳಗಿನ ಚಿತ್ರವನ್ನು ಗಮನಿಸಿ, ಉತ್ತರಿಸಿ.



a) ಭಾರತದ ರಾಷ್ಟ್ರಪಿತ b) ಭಾರತದ ವಿದೇಶಾಂಗ ನೀತಿಯ ಶಿಲ್ಪಿ

c) ಭಾರತದ ಉಕ್ಕಿನ ಮನುಷ್ಯ d) ಭಾರತದ ಸಂವಿಧಾನ ಶಿಲ್ಪಿ

II. ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬಿಟ್ಟ ಸ್ಥಳಗಳನ್ನು ಭರ್ತಿ ಮಾಡಿ : **(5 × 1 = 5)**

[ಬೆಂಗಳೂರು, ಉದಾರೀಕರಣ, ಡಿ.ಎಂ.ಕೆ., ವಿಧಿ.360, ಅಮರ್ತ್ಯ ಸೇನ್, ಮಹಾತ್ಮ ಗಾಂಧಿ]

6) ____________ ಒಂದು ಪ್ರಾದೇಶಿಕ ರಾಜಕೀಯ ಪಕ್ಷವಾಗಿದೆ.

7) ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ ____________ ನಲ್ಲಿದೆ.

8) ____________ ರವರ ಪ್ರಕಾರ ಅನಕ್ಷರತೆ 'ಒಂದು ಅಸ್ವಾತಂತ್ರ್ಯ'ವಾಗಿದೆ.

9) ____________ ರಾಷ್ಟ್ರಪತಿಯವರಿಗೆ ಆರ್ಥಿಕ ತುರ್ತುಪರಿಸ್ಥಿತಿ ಘೋಷಣೆಯ ಅಧಿಕಾರವನ್ನು ನೀಡಿದೆ.

10) ಬೌದ್ಧಿಕ ಪಲಾಯನವು ____________ ದ ರಾಜಕೀಯ ಪರಿಣಾಮವಾಗಿದೆ.

III. ಹೊಂದಿಸಿ ಬರೆಯಿರಿ. **(5 × 1 = 5)**

11)

| ಎ | | ಬಿ | |
|---|---|---|---|
| a) | ಜಿಲ್ಲಾಧಿಕಾರಿ | i) | ಡಾ. ಬಿ.ಆರ್. ಅಂಬೇಡ್ಕರ್ |
| b) | ಮೂಕನಾಯಕ | ii) | ತಾಲಿಬಾನ್ |
| c) | ವೆಸ್ಟ್‌ಫಾಲಿಯಾ ಒಪ್ಪಂದ | iii) | ಭ್ರಷ್ಟಾಚಾರದ ವಿರುದ್ಧ ಭಾರತ |
| d) | ಅಣ್ಣಾ ಹಜಾರೆ | iv) | ರಾಷ್ಟ್ರಗಳ ಸಂಘ |
| e) | ಆಫ್ಘಾನಿಸ್ಥಾನ | v) | ರಾಷ್ಟ್ರ ನಿರ್ಮಾಣ |
| | | vi) | ಜಿಲ್ಲಾಡಳಿತದ ಮುಖ್ಯಸ್ಥರು |

IV. ಕೆಳಗಿನ ಪ್ರಶ್ನೆಗಳಿಗೆ **ಪ್ರತಿಯೊಂದಕ್ಕೂ 1** ವಾಕ್ಯದಲ್ಲಿ ಉತ್ತರಿಸಿ : **(5 × 1 = 5)**

12) ಎ.ಐ.ಟಿ.ಯು.ಸಿ. ಯನ್ನು ವಿಸ್ತರಿಸಿ.

13) ಸಮ್ಮಿಶ್ರ ಸರ್ಕಾರದ ಅರ್ಥವನ್ನು ಬರೆಯಿರಿ.

14) ಅಸ್ಮಿತೆ ರಾಜಕೀಯದ ಪ್ರಮುಖ ಆಧಾರಗಳಲ್ಲಿ ಒಂದು ಉದಾಹರಣೆಯನ್ನು ಕೊಡಿ.

15) ಸಿರಿಯಾದ ಯಾವುದಾದರೂ ಒಂದು ಜನಾಂಗವನ್ನು ಹೆಸರಿಸಿ.

16) ಅಲಿಪ್ತ ನೀತಿ ಎಂದರೇನು?

## ಭಾಗ – ಬಿ

V. ಕೆಳಗಿನ **ಯಾವುದಾದರೂ ಐದು** ಪ್ರಶ್ನೆಗಳಿಗೆ **ಪ್ರತಿಯೊಂದಕ್ಕೂ 2-3** ವಾಕ್ಯಗಳಲ್ಲಿ ಉತ್ತರಿಸಿ : **(5 × 2 = 10)**

17) ಫೆಡರಲ್ ನ್ಯಾಯಾಲಯವು ಯಾವಾಗ ಮತ್ತು ಎಲ್ಲಿ ಸ್ಥಾಪನೆಯಾಯಿತು?

18) ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಹಿನ್ನೆಲೆಯ ಯಾವುದಾದರೂ ಎರಡು ಕಡ್ಡಾಯ ಘೋಷಣೆಗಳನ್ನು ಬರೆಯಿರಿ.

19) ಕರ್ನಾಟಕ ಲೋಕಸೇವಾ ಆಯೋಗದ ಎರಡು ಕಾರ್ಯಗಳನ್ನು ತಿಳಿಸಿ.

20) ಕೇಂದ್ರ–ರಾಜ್ಯ ಸಂಬಂಧಗಳಲ್ಲಿ ಶಾಸನೀಯ ಅಧಿಕಾರಗಳ ಮೂರು ಪಟ್ಟಿಗಳಾವುವು?

21) ದ್ವಿ–ರಾಷ್ಟ್ರಾಧಿಪತ್ಯ ಎಂದರೇನು?

22) ಬ್ರಿಕ್ಸ್ (BRICS) ನ ಯಾವುದಾದರೂ ಎರಡು ಸದಸ್ಯ ರಾಷ್ಟ್ರಗಳನ್ನು ಹೆಸರಿಸಿ.

23) ಮಿಲಿಟರಿ ಬಣಗಳಿಗೆ ಎರಡು ಉದಾಹರಣೆಗಳನ್ನು ಕೊಡಿ.

24) ತಾಷ್ಕೆಂಟ್ ಒಪ್ಪಂದಕ್ಕೆ ಸಹಿ ಹಾಕಿದವರಾರು?

**ಭಾಗ – ಸಿ**

VI. ಕೆಳಗಿನ **ಯಾವುದಾದರೂ ಆರು** ಪ್ರಶ್ನೆಗಳಿಗೆ **ಪ್ರತಿಯೊಂದಕ್ಕೂ 15-20** ವಾಕ್ಯಗಳಲ್ಲಿ ಉತ್ತರಿಸಿ : **($6 \times 5 = 30$)**

25) 1935 ರ ಭಾರತ ಸರ್ಕಾರ ಕಾಯ್ದೆಯ ಮುಖ್ಯಾಂಶಗಳನ್ನು ಚರ್ಚಿಸಿ.

26) ಭಾಷಾವಾರು ರಾಜ್ಯಗಳ ಪುನರ್‌ರಚನೆಯನ್ನು ವಿಶ್ಲೇಷಿಸಿ.

27) ಮುಖ್ಯ ಕಾರ್ಯದರ್ಶಿಯವರ ಕಾರ್ಯಗಳನ್ನು ವಿವರಿಸಿ.

28) ಹಿಂದುಳಿದ ವರ್ಗಗಳ ಚಳುವಳಿಯ ಕಾರಣಗಳನ್ನು ವಿವರಿಸಿ.

29) ಈ ಕೆಳಗಿನ ಚಿತ್ರವನ್ನು ಪರಿಗಣಿಸಿ, ಪರಿಸರ ಚಳುವಳಿಯಲ್ಲಿ ಇವರ ಕೊಡುಗೆಗಳನ್ನು ವಿವರಿಸಿ.



30) ಭಯೋತ್ಪಾದನೆಗೆ ಕಾರಣಗಳನ್ನು ವಿವರಿಸಿ.

31) ಭ್ರಷ್ಟಾಚಾರದ ವಿರುದ್ಧ ಯುವಜನತೆಯ ಪಾತ್ರವನ್ನು ಚರ್ಚಿಸಿ.

32) **"**ವರ್ಣಭೇದ ಮತ್ತು ಜನಾಂಗೀಯ ತಾರತಮ್ಯವನ್ನು ಭಾರತ ವಿರೋಧಿಸುತ್ತದೆ**"**. ಸಮರ್ಥಿಸಿ.

33) ಭಾರತ ಮತ್ತು ಶ್ರೀಲಂಕಾ ಸಂಬಂಧಗಳ ಸಮಸ್ಯೆಗಳಿಗೆ ಕಾರಣಗಳನ್ನು ಚರ್ಚಿಸಿ.

## ಭಾಗ – ಡಿ

VII. ಕೆಳಗಿನ **ಯಾವುದಾದರೂ ಎರಡು** ಪ್ರಶ್ನೆಗಳಿಗೆ **ಪ್ರತಿಯೊಂದಕ್ಕೂ 30-40** ವಾಕ್ಯಗಳಲ್ಲಿ ಉತ್ತರಿಸಿ : **($2 \times 10 = 20$)**

34) ಭಾರತದ ಪಕ್ಷ ಪದ್ಧತಿಯ ಸ್ವರೂಪವನ್ನು ವಿವರಿಸಿ.

35) ಲಿಂಗಾಧಾರಿತ ಅಸಮಾನತೆಗೆ ಕಾರಣಗಳು ಮತ್ತು ಪರಿಹಾರಗಳನ್ನು ಕುರಿತು ಚರ್ಚಿಸಿ.

36) ಖಾಸಗೀಕರಣದ ಪ್ರಾಮುಖ್ಯತೆ ಮತ್ತು ರಾಜಕೀಯ ಪರಿಣಾಮಗಳನ್ನು ಮೌಲ್ಯೀಕರಿಸಿ.

37) ಸಾರ್ಕ್ (SAARC) ನ ಸ್ಥಾಪನೆ ಮತ್ತು ಸಹಕಾರ ಕ್ಷೇತ್ರಗಳನ್ನು ಕುರಿತು ವಿವರಿಸಿ.

## ಭಾಗ – ಇ

### (ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗಾಗಿ)

5) **'**ಬಂಗಬಂಧು**'** ಎಂದು ಯಾರನ್ನು ಕರೆಯಲಾಗಿದೆ?

29) ಚಿಪ್ಕೋ ಚಳುವಳಿಯನ್ನು ಕುರಿತು ಬರೆಯಿರಿ.

## (English Version)

***Instructions :*** *1.* ***For Part 'A' questions only the first written answer will be considered for evaluation.***

*2. Answer* ***all*** *questions.*

*3. Figures in the right side margin indicate marks.*

*4. Write correct question numbers for your answers.*

*5. For questions having pictures, alternate questions given at the end of the question paper in a separate Part-E section for visually challenged students.*

## PART – A

I. Answer the following questions by choosing correct answers : **(5 × 1 = 5)**

1) Root word of Election

a) Rumpere b) Terrer

c) Eligere d) Ad and Ministrare

2) Write the correct answer of All India Services from the below.

i) Indian Administrative Service

ii) Indian Police Service

iii) Indian Forest Service

iv) Indian Foreign Service

a) i) only b) ii) only

c) i), ii) and iii) only d) i), ii), iii) and iv)

3) Caste based inequality means

a) Feeling of Upper caste – Lower caste

b) Feeling of Rich – Poor

c) Feeling of Male – Female


d) Feeling of Black – White

4) When was the ASEAN established?

a) 1967 b) 1985

c) 1989 d) 2006

5) Observe the below picture and answer.



a) Father of the Nation

b) Architect of Indian Foreign Policy

c) Iron man of India

d) Architect of Indian Constitution

II. Fill in the blanks with appropriate answer in the bracket : **($5 \times 1 = 5$)**

[Bengaluru, Liberalisation, DMK, Art.360, Amartya Sen, Mahatma Gandhi]

6) ___________ is a regional political party.

7) The Karnataka Administrative Tribunal is located in ___________.

8) According to ___________ illiteracy is a 'unfreedom'.

9) ___________ empowers the President to declare financial emergency.

10) Brain drain is political implication of ___________.

III. Match the following : **($5 \times 1 = 5$)**

11)

| | A | | B |
|---|---|---|---|
| a) | Deputy Commissioner | i) | Dr. B.R. Ambedkar |
| b) | Mook Nayak | ii) | Taliban |
| c) | Treaty of Westphalia | iii) | India Against Corruption |
| d) | Anna Hazare | iv) | League of Nations |
| e) | Afghanistan | v) | Nation Building |
| | | vi) | Head of the District Administration |

IV. Answer the following questions in **1** sentence **each.** **(5 × 1 = 5)**

12) Expand AITUC.

13) Write the meaning of Coalition Government.

14) Give an example to important bases of Identity Politics.

15) Name any one of ethnic group of Syria.

16) What is Non-alignment policy?

## PART – B

V. Answer **any five** of the following questions in **2-3** sentences **each**. **(5 × 2 = 10)**

17) When was Federal Court established and where?

18) Write any two mandatory declarations of antecedents of the candidates who contesting election.

19) Mention two functions of Karnataka Public Service Commission.

20) Which are three lists of legislative powers of Center-State relations?

21) What is Bi-polarity?

22) Name any two member countries of BRICS.

23) Give two examples of Military Blocs.

24) Who have signed Tashkent Agreement?

## PART – C

VI. Answer **any six** of the following questions in **15-20** sentences **each**. **(6 × 5 = 30)**

25) Discuss the provisions of Government of India Act, 1935.

26) Analyse the linguistic reorganization of states.

27) Explain the functions of Chief Secretary.

28) What are the causes for backward classes movement?

29) Consider the below picture, write her contributions to environment movement.



30) Describe the causes for Terrorism.

31) Discuss the role of youth against corruption.

32) “India is anti-apartheid and racial discrimination”. Justify.

33) Discuss the causes of disputes in the India and Srilanka relations.

## PART – D

VII. Answer **any two** of the following questions in **30-40** sentences **each**.

**(2 × 10 = 20)**

34) Explain the nature of party system in India.

35) Discuss the causes and remedies for gender based inequality.

36) Evaluate the importance and political implications of privatisation.

37) Describe the establishment and areas of regional co-operation of SAARC.

## PART – E

### (For Visually Challenged Students)

5) Who was called as 'Bangabandhu'?

29) Write about Chipco Movement.